ದ್ರಾಕ್ಷಿ ಬೆಳೆಗೆ ಮಳೆಯಿಂದ ಹಾನಿಯಾಗಿರುವುದು

೨೩೨೭. ಶ್ರೀ ಕೆ. ಪಿ. ಮೊಗೆಣ್ಣನವರು (ಸದಲಗ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರು ಲಕ್ಷಾಂತರ ರೂ.ಗಳ ಬಂಡವಾಳ ಹಾಕಿ ಬೆಳೆಸಿದ ದ್ರಾಕ್ಷಿ ಮಳೆಯಿಂದ ಹಾನಿಯಾಗುವ ಸಂಭವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಲಕ್ಷಾಂತರ ರೂ.ಗಳ ನಷ್ಟಕ್ಕೆ ಒಳಗಾಗುವ ರೈತರನ್ನು ಉಳಿಸಿ ಕೊಳ್ಳಲು ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಇ) ಮಹಾರಾಷ್ಟ್ರ ಸರ್ಕಾರದಲ್ಲಿ ಈ ವಿಷಯದಲ್ಲಿ ವಿಮೆ ಯೋಜನೆ ಮಾಡಿ ರೈತರನ್ನು ಸಂರಕ್ಷಿಸುವ ಯೋಜನೆಗಳಂತೆ ನಮ್ಮ ಸರ್ಕಾರದಲ್ಲಿಯೂ ಮಾಡಲು ಕ್ರಮ ಕೈಗೊಳ್ಳಲು ಆಗುವುದೇ ?

ಶ್ರೀ ವೈ.ಕೆ. ರಾಮಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು. ಸಹಜವಾಗಿ ಮಳೆಗಾಲದಲ್ಲಿ ಬಿದ್ದ ಮಳೆಯಿಂದ ದ್ರಾಕ್ಷಿ ಬೆಳೆಗೆ ಹಾನಿಯಾಗುವುದಿಲ್ಲ. ಆದರೆ ಈ ಸಾಲಿನಲ್ಲಿ (೮೭-೮೮) ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಪರಾಗಸ್ಪರ್ಶ ಹಂತದಲ್ಲಿದ್ದ ದ್ರಾಕ್ಷಿ ತೋಟಗಳಿಗೆ ಸ್ವಲ್ಪ ಮಟ್ಟಿಗೆ ಹಾನಿಯಾಗಿರುತ್ತದೆ.

ಆ) ನೈಸರ್ಗಿಕ ವೈಪರೀತ್ಯದಿಂದ ದ್ರಾಕ್ಷಿ ಬೆಳೆಗೆ ಹಾನಿಯಾಗುವ ನಷ್ಟಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುವುದು ಕಷ್ಟಕರ.

ಇ) ಮಹಾರಾಷ್ಟ್ರ ಸರ್ಕಾರ ದ್ರಾಕ್ಷಿ ಬೆಳೆ ವಿಮಾ ಯೋಜನೆ ಜಾರಿಗೊಳಿಸಿರುವುದಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ರಾಜ್ಯ ದ್ರಾಕ್ಷಿ ಬಾಗಾಯಿತ್‌ದಾರ್ ಸಂಘವು ದ್ರಾಕ್ಷಿ ಬೆಳೆಗೆ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿರುವುದು ತಿಳಿದು ಬಂದಿದೆ. ಕರ್ನಾಟಕ ಸರ್ಕಾರ ವಿಮಾ ಯೋಜನೆಯನ್ನು ದ್ರಾಕ್ಷಿ ಬೆಳೆಗೆ ಜಾರಿಗೊಳಿಸಲು ಕೇಂದ್ರ ಸರ್ಕಾರದ ನೀತಿ ನಿಯಮಗಳ ಪ್ರಕಾರ ಮಾಡಲು ಸಾಧ್ಯವಿಲ್ಲ.

ಹಾನಗಲ್ ಶ್ರೀ ಕುಮಾರೇಶ್ವರ ಆರ್ಟ್ಸ್ ಕಾಲೇಜ್ ಪ್ರಾಧ್ಯಾಪಕರ ಬಗ್ಗೆ

೨೩೨೮. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾನಗಲ್ ಶ್ರೀ ಕುಮಾರೇಶ್ವರ ಕಲಾ ಕಾಲೇಜಿನಲ್ಲಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಂಖ್ಯೆ ಎಷ್ಟು ?

ಆ) ಕಾಲೇಜು ಪ್ರಾರಂಭವಾದಾಗಿನಿಂದಲೂ ಅವರಿಗೆ ಸರಿಯಾಗಿ ಸಂಬಳವನ್ನು ನೀಡಲಾಗುತ್ತಿದೆಯೇ ?

ಇ) ಕಾಲೇಜಿಗೆ ಸಹಾಯಧನ ನೀಡಲಾಗುತ್ತಿದೆಯೆ? ಹಾಗಿದ್ದಲ್ಲಿ ಎಂದಿನಿಂದ ?

ಈ) ೪ ತಿಂಗಳುಗಳಿಂದ ಜಿಲ್ಲಾಧಿಕಾರಿಯವರ ಕಛೇರಿ ಎದುರು ಕೆಲಸದಿಂದ ತೆಗೆದು ಹಾಕಲ್ಪಟ್ಟಿರುವ ವಿರುದ್ಧ ಸತ್ಯಾಗ್ರಹ ಹೂಡಿದವರನ್ನು ಪುನರ್ ನೇಮಕ ಮಾಡಿಕೊಳ್ಳಲಾಗಿದೆಯೆ?

ಉ) ಅವರ ನೇಮಕಾತಿ ಹಾಗೂ ಸೇವೆಗಳನ್ನು ಶಿಕ್ಷಣ ಇಲಾಖೆ ಮಾನ್ಯತೆ ಕೊಟ್ಟಿದೆಯೆ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಬೋಧಕ ಸಿಬ್ಬಂದಿ—೧೫
ಬೋಧಕೇತರ ಸಿಬ್ಬಂದಿ—೧೪
ಒಟ್ಟು—೨೯.

ಅ) ಸದರಿ ಕಾಲೇಜು ದಿನಾಂಕ ೧-೭-೧೯೮೬ರಿಂದ ವೇತನ ಅನುದಾನಕ್ಕೆ ಒಳಪಟ್ಟಿದೆ. ಅನುಮೋದಿತ ಹುದ್ದೆಗಳಿಗೆ ಪೂರ್ಣ ವೇತನ ಪಾವತಿಸಲಾಗುತ್ತಿದೆ.

ಇ) ಹೌದು. ದಿನಾಂಕ ೧-೭-೧೯೮೬ರಿಂದ ವೇತನ ಅನುದಾನ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಈ) ಹಾನಗಲ್‌ನ ಕಾಲೇಜು ಆಡಳಿತ ಮಂಡಳಿಯು ೧೪ ಜನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮಸ್ಯೆಯನ್ನು ಹೊಸದಾಗಿ ರಚಿತವಾದ ಆಡಳಿತ ಮಂಡಳಿಯು ಪರಿಶೀಲಿಸಿ ಎಲ್ಲಾ ೧೪ ಜನ ಸಿಬ್ಬಂದಿಯನ್ನೂ ಪುನರ್ ನೇಮಕ ಮಾಡಿಕೊಂಡಿರುವುದಾಗಿ, ಈ ನೇಮಕಗಳಿಗೆ ಅನುಮೋದನೆ ಕೋರಿ, ಕಾಲೇಜು ಶಿಕ್ಷಣ ನಿರ್ದೇಶಕರಿಗೆ ಪ್ರಸ್ತಾವನೆ ಕಳುಹಿಸಿದ್ದಾರೆ.

ಉ) ಇಲ್ಲ. ಪರಿಶೀಲನೆಯಲ್ಲಿದೆ.

ಮಾರುಕಟ್ಟೆ ಮತ್ತು ಕೃಷಿ ಉತ್ಪನ್ನಗಳ ಬಗ್ಗೆ

೨೧೧೫. ಶ್ರೀಪಂಪಾಪತಿ (ದಾವಣಗೆರೆ).—ಮಾನ್ಯ ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖಿ.ಷ್ಮಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕೃಷಿ ಉತ್ಪನ್ನಗಳ ನಿಯಂತ್ರಿತ ಮಾರುಕಟ್ಟೆಗಳ ಸಂಖ್ಯೆ ಎಷ್ಟು?

ಆ) ಕೃಷಿ ಉತ್ಪನ್ನ ಮಾರುಕಟ್ಟೆಗಳಿಂದ ಬರುವ ಆಯಾ ಮಾರುಕಟ್ಟೆಗಳ ಆದಾಯ ಎಷ್ಟು?

ಇ) ಈ ಮಾರುಕಟ್ಟೆಗಳಿಂದ ಬರುವ ಆದಾಯವನ್ನು ಯಾವ ಬಾಬ್ತಿಗೆ ಉಪಯೋಗಿಸಲಾಗುತ್ತಿದೆ. ಹಾಗೂ ಅವುಗಳಿಂದ ರೈತರಿಗೆ ಆಗುವ ಅನುಕೂಲಗಳು ಯಾವುವು ?

ಶ್ರೀ ಕೆ. ಅಮಾರನಾಥಶೆಟ್ಟಿ (ಧಾರ್ಮಿಕ ಹಾಗೂ ದತ್ತಿ ಮತ್ತು ನಿಯಂತ್ರಿತ ಮಾರುಕಟ್ಟೆ ಹಾಗೂ ಖಿಷ್ಮಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ಮುಖ್ಯ ಮಾರುಕಟ್ಟೆಗಳು ೧೧೬.

ಉಪ ಮಾರುಕಟ್ಟೆಗಳು ೨೪೫.

ಆ) ಪ್ರತಿ ಮಾರುಕಟ್ಟೆ ಆದಾಯವನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಸೂಚಿಸಲಾಗಿದೆ.

ಈ ಸಮಿತಿಗೆ ಕಳೆದ ಮೂರು ವರ್ಷಗಳಲ್ಲಿ ಮಾರುಕಟ್ಟೆ ಶುಲ್ಕ ಮತ್ತು ಲೈಸನ್ಸ್ ಶುಲ್ಕದಿಂದ ಬಂದ ಒಟ್ಟು ಆದಾಯ ಈ ರೀತಿ ಇದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಮಾರುಕಟ್ಟೆ ಶುಲ್ಕ	ಲೈಸನ್ಸ್ ಶುಲ್ಕ	ಒಟ್ಟು
೧೯೮೫-೮೬	೧೧.೮೭	೦.೪೨	೧೨.೨೯
೧೯೮೬-೮೭	೧೩.೦೯	೦.೪೩	೧೩.೫೨
೧೯೮೭-೮೮	೧೭.೨೭	೦.೪೫	೧೭.೭೨

ಇ) ಅ) ಮಾರುಕಟ್ಟೆ ಸಮಿತಿಗಳು ತಮ್ಮ ಆದಾಯದಲ್ಲಿ ಈ ಕೆಳಗೆ ತಿಳಿಸಿದ ಬಾಬ್ತುಗಳಿಗೆ ಖರ್ಚು ಮಾಡಿಂತ್ತವೆ.—

೧) ಪ್ರಾಂಗಣಕ್ಕಾಗಿ ಜಮೀನು ಖರೀದಿ.

೨) ಪ್ರಾಂಗಣಗಳಲ್ಲಿ ರೈತರಿಗೆ ಹಾಗೂ ವರ್ತಕರಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲು.

೩) ರಾಜ್ಯ ಸಂಚಿತ ನಿಧಿಗೆ ಮತ್ತು ಮಾರಾಟ ಮಂಡಳಿಗೆ ವಂತಿಗೆ.